**ದಿನಾಂಕಃ 07-12-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದಃ**

10. ಟ್ರ್ಯಾಪ್ ಪಂಚನಾಮೆ ದಿನ ಆರೋಪಿಯ ಕಚೇರಿ ಬಳಿ ಸಂಜೆ 5.45-6.00 ಗಂಟೆಗೆ ಹೋಗಿರುತ್ತೇನೆ. ಆರೋಪಿಯನ್ನು ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ತಡೆದು ನಿಲ್ಲಿಸಿದಾಗ ಸಮಯ ಸಂಜೆ 6.45 ಗಂಟೆಯಾಗಿತ್ತು . ಆರೋಪಿಯನ್ನು ಸಂಜೆ 6.45 ಗಂಟೆಗೆ ಆ ದೇವಸ್ಥಾನದ ಹತ್ತಿರ ತಡೆದು ನಿಲ್ಲಿಸಿದ ಬಗ್ಗೆ ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿದ್ದಾರೆ. ಆಗ ಪೂರ್ತಿ ಬೆಳಕು ಇರಲಿಲ್ಲ ಕತ್ತಲೆಯಾಗುವ ಸಮಯ ಆಗಿತ್ತು . ಆರೋಪಿಯನ್ನು ಅದೇ ಜಾಗದಲ್ಲಿ ದಸ್ತಗಿರಿ ಮಾಡಿದರು. ಆರೋಪಿಯನ್ನು ತಡೆದ ತಕ್ಷಣ ದಸ್ತಗಿರಿ ಮಾಡಿದ್ದಾರೆ ಎಂದರೆ ಹೌದು . ನಂತರ ಸಂಜೆ 7.35 ಗಂಟೆಗೆ ಆರೋಪಿಯನ್ನು ಅಲ್ಲಿಂದ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಬಂದರು. ಸಂಜೆ 7.35 ರಿಂದ ರಾತ್ರಿ 9.30 ಗಂಟೆವರೆಗೆ ಅಲ್ಲಿ ಪಂಚನಾಮೆ ಮಾಡಿದರು. ಪಂಚನಾಮೆಯಲ್ಲಿ ಈ ಸಮಯವನ್ನೆಲ್ಲಾ ನಮೂದು ಮಾಡಿದ್ದಾರಾ ಎಂದರೆ ಮಾಡಿರಬಹುದು . ಆರೋಪಿ ಹಿರೋ ಹೊಂಡಾ ವಾಹನದಲ್ಲಿ ಸಂಜೆ 6.00 ಗಂಟೆಗೆ ಓಡಿ ಹೋದಾಗ ಅವನನ್ನು ಅರ್ಧ ಗಂಟೆ ಕಾಲ ಬೆನ್ನಟ್ಟಿ ಹಿಂಬಾಲಿಸಿರುತ್ತಾರೆ. ತಾಲೂಕು ಪಂಚಾಯತಿ ಕಚೇರಿ ಕುಮಟಾ ನ್ಯಾಯಾಲಯದ ರಸ್ತೆಯಲ್ಲಿಯೇ ಇದೆ ಸ್ವಲ್ಪ ದೂರದಲ್ಲಿ ಇದೆ . ಸುಮಾರು 100 ಮೀಟರ್ ದೂರದಲ್ಲಿ ಇದೆ . ಆ ರಸ್ತೆಯಲ್ಲಿ ನ್ಯಾಯಾಲಯದ ನಂತರ ನೇರವಾಗಿ ಇಳಿಜಾರಿನಲ್ಲಿ ಬಂದರೆ ಮಾರುಕಟ್ಟೆ ಸಿಗುತ್ತದೆ ಮತ್ತು ನಂತರ ಎಡಕ್ಕೆ ತಿರುಗಿದರೆ ಸ್ವಲ್ಪ ಮುಂದೆ ಹೋದರೆ ಶಾಂತಿಕಾ ಪರಮೇಶ್ವರಿ ದೇವಸ್ಥಾನ ಸಿಗುತ್ತದೆ ಎಂದರೆ ದೇವಸ್ಥಾನದ ರಸ್ತೆ ಸಿಗುತ್ತದೆ ದೇವಸ್ಥಾನ ಸಿಗುವುದಿಲ್ಲ. ನೇರವಾಗಿ ನ್ಯಾಯಾಲಯ ದಾಟಿ ಮಾರುಕಟ್ಟೆ ದಾಟಿ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಗೆ ಎಡಕ್ಕೆ ತಿರುಗಿದ ಮೇಲೆ ಅಲ್ಲಿಂದ ಒಂದು ಕಾಲು ಕಿ.ಮೀ. ದೂರದಲ್ಲಿ ಶಾಂತಿಕಾ ಪರಮೇಶ್ವರಿ ದೇವಸ್ಥಾನ ಇದೆ . ಸದರಿ ಮಾರ್ಗದಲ್ಲಿ ಆರೋಪಿ ಕಚೇರಿಯಿಂದ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಒಂದು ಕಾಲು ಕಿ.ಮೀ. ದೂರ ಆಗುತ್ತದೆ. ಆರೋಪಿ ಆ ದಿನ ಆ ರಸ್ತೆಯಲ್ಲಿ ಹೋಗಿರುವುದಿಲ್ಲ. ಬೇರೆ ಯಾವುದೋ ರಸ್ತೆಯಲ್ಲಿ ಹೋಗಿರುತ್ತಾನೆ ಆದರೆ ಆ ಬೇರೆ ರಸ್ತೆ ಯಾವುದು ಎಂದು ಗೊತ್ತಿಲ್ಲ. ಆರೋಪಿಯನ್ನು ಹಿಂಬಾಲಿಸಿದಾಗ ನಾನೂ ಸಹ ಹಿಂಬಾಲಿಸಿ ಹೋಗಿರುತ್ತೇನೆ. ಆಗ ನಾನು ನನ್ನ ಬೈಕ್ ನಲ್ಲಿ

ಹಿಂಬಾಲಿಸಿಕೊಂಡು ಹೋದೆ . ಟ್ರ್ಯಾಪ್ ಪಂಚನಾಮೆಯಲ್ಲಿ ನಾನು ಆ ದಿನ ಯಾವ ಬೈಕ್ ನಲ್ಲಿ ತಿರುಗಾಡಿದೆ ಎಂದು ಬರೆದಿದ್ದಾರಾ ಎಂದು ನೆನಪಿಲ್ಲ. ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಆರೋಪಿ ಕಚೇರಿಯಿಂದ ಯಾವ ಮಾರ್ಗವಾಗಿ ಹಿಂಬಾಲಿಸಿಕೊಂಡು ಹೋದರು ಎಂದು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿಲ್ಲ ಆರೋಪಿ ಮೊದಲಿಗೆ ಕೆಳಗಿನ ರಸ್ತೆಯಲ್ಲಿ ಹೋದ ಎಂದು ನಾನು ಪೊಲೀಸ್ ನವರಿಗೆ ಹೇಳಿದೆ . ಆರೋಪಿ ಹೋದ ಬೇರೆ ರಸ್ತೆಯಿಂದ ಆರೋಪಿ ಕಚೇರಿಯಿಂದ ಸದರಿ ದೇವಸ್ಥಾನಕ್ಕೆ ಎಷ್ಟು ದೂರ ಆಗುತ್ತದೆ ಎಂದರೆ ಆರೋಪಿ ಎಲ್ಲಿ ಎಲ್ಲಿ ಸುತ್ತಾಡಿ ದೇವಸ್ಥಾನದ ಬಳಿ ಬಂದ ಎಂದು ನನಗೆ ಗೊತ್ತಾಗುತ್ತಿಲ್ಲ. ನನ್ನ ಮನೆ ಕುಮಟಾ ಮಾರುಕಟ್ಟೆಯಲ್ಲಿ ಇದೆ ಎಂದರೆ ಸರಿಯಲ್ಲ. ಮಾರುಕಟ್ಟೆಯಿಂದ 9 ಕಿ.ಮೀ. ದೂರದಲ್ಲಿ ನನ್ನ ಮನೆ ಇದೆ . ನಾನು ಕುಮಟಾದ ಬಾಡದಲ್ಲಿ ವಾಸ ಇದ್ದೇನೆ. ಸಾಮಾನ್ಯವಾಗಿ ನಾನು ನಿರಂತರವಾಗಿ ನನ್ನ ಮನೆಯಿಂದ ಕುಮಟಾ ಮಾರುಕಟ್ಟೆಗೆ ಬರುತ್ತೇನೆ ಎಂದರೆ ಇಲ್ಲಾ ನಾನು 10 ದಿನಕ್ಕೆ ಅಥವಾ 4 ದಿನಕ್ಕೆ ಒಮ್ಮೆ ಬರುತ್ತೇನೆ. ತಾಲೂಕು ಕಚೇರಿ , ಶಾಂತಿಕಾ ಪರಮೇಶ್ವರಿ ದೇವಸ್ಥಾನ ಮತ್ತು ಕುಮಟಾ ನ್ಯಾಯಾಲಯದ ಸುತ್ತಮುತ್ತಲಿನ ಪರಿಸರದ ಬಗ್ಗೆ ನನಗೆ ಗೊತ್ತಿದೆ. ಆರೋಪಿಯನ್ನು ಹಿಂಬಾಲಿಸಿಕೊಂಡು ಹೋದಾಗ ಆರೋಪಿ ತಪ್ಪಿಸಿಕೊಂಡು ಕಣ್ಣಿಗೆ ಕಾಣದಂತೆ ಮರೆಯಾಗಿದ್ದ. ಪೊಲೀಸ್ ನವರ ಜೀಪು ಒಂದು ಹಿಂಬಾಲಿಸುತ್ತಿತ್ತು . ಆರೋಪಿ ತಪ್ಪಿಸಿಕೊಂಡು ಹೋದ ಮೇಲೆ ಸುಮಾರು ಒಂದು ತಾಸಿಗೆ ಪತ್ತೆಯಾದ . ಆ ಒಂದು ತಾಸು ಸಮಯದಲ್ಲಿ ಆರೋಪಿ ಯಾವ ಯಾವ ಮಾರ್ಗವಾಗಿ ಹೋದ ಎಂದು ನನಗೆ ಹೇಳಲಾಗುವುದಿಲ್ಲ. ಒಂದು ತಾಸು ಆರೋಪಿ ನಾಪತ್ತೆಯಾಗಿದ್ದ ಎಂದು ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದು ನೆನಪಿಲ್ಲ. ಪಂಚನಾಮೆಯಲ್ಲಿ ಆರೋಪಿಯನ್ನು ಕುಮಟಾ ಶಹರದಲ್ಲಿ ಎಲ್ಲಾ ಬೆನ್ನಟ್ಟಿ ಕೊನೆಗೆ ಕುಮಟಾದ ಶಹರದ ಹೆರವಟ್ಟಾದ ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಅಡ್ಡ ಹಾಕಿ ಹಿಡಿದೆವು ಎಂದು ಬರೆದಿದ್ದಾರೆ ಎಂದರೆ ಹೌದು . ಬೆನ್ನಟ್ಟುವುದು ಎಂಬ ಪದದ ಅರ್ಥ ಆರೋಪಿ ಎಲ್ಲಿ ಹೋಗುತ್ತಿದ್ದಾನೋ ಅವನ ಹಿಂದೆ ಹೋಗುವುದು ಎಂದು ಆಗಿರುತ್ತದೆ ಎಂದರೆ ಹೌದು . ಆರೋಪಿ ಒಂದು ತಾಸು ಎಲ್ಲಿಗೆ ಹೋಗಿದ್ದ ಎಂದು ಲೋಕಾಯುಕ್ತ ಪೊಲೀಸ್ ನವರು ಆರೋಪಿಯನ್ನು ವಿಚಾರಣೆ ಮಾಡಿದರಾ ಎಂದರೆ ಹೌದು . ಆರೋಪಿ ಒಂದು ತಾಸು ಎಲ್ಲಿ ನಾಪತ್ತೆಯಾಗಿದ್ದ ಎಂದು ಹೇಳಲಿಲ್ಲ . ಆರೋಪಿ ಅದಕ್ಕೆ ಹಾರಿಕೆ ಉತ್ತರ ಕೊಟ್ಟ . ಆ ಉತ್ತರವನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ ಸಮಯ ರಾತ್ರಿ

8.40 ಎಂದು ಪಂಚನಾಮೆಯಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಹೌದು ಎಂದು ನುಡಿದಿದ್ದಾರೆ. ನನಗೆ ತಾಸು ನಿಮಿಷದ ಬಗ್ಗೆ ಗೊತ್ತಿದೆ . ನ್ಯಾಯಾಲಯದಲ್ಲಿ ಈಗ ನನ್ನ ಎದುರುಗಡೆ ಒಂದು ಗಡಿಯಾರ ಇದೆ ಎಂದರೆ ಹೌದು. ಈಗ ಆ ಗಡಿಯಾರದಲ್ಲಿ ಸಮಯ 3.25 ಆಗಿದೆ ಎಂದರೆ ಹೌದು . ಸಂಜೆ 6.45 ಗಂಟೆಗೆ ಮತ್ತು ರಾತ್ರಿ 8.40 ಗಂಟೆಗೆ ಬಹಳ ವ್ಯತ್ಯಾಸ ಇದೆ ಎಂದರೆ ಹೌದು . ಪಂಚನಾಮೆಯ ಕೊನೆಯಲ್ಲಿ ಅದನ್ನು ದಿನಾಂಕ 17.09.2013 ರಂದು ರಾತ್ರಿ 1.00 ಗಂಟೆಗೆ ಮುಗಿಸಿರುವುದಾಗಿ ಬರೆದಿದ್ದಾರೆ ಎಂದರೆ ಹೌದು . ರಾತ್ರಿ 9.30 ಗಂಟೆ ಮತ್ತು ಮಾರನೇ ದಿನ ಬೆಳಗಿನ ಮುಂಜಾನೆ 1.00 ಗಂಟೆಗೂ ಬಹಳ ವ್ಯತ್ಯಾಸ ಇದೆ ಎಂದರೆ ಹೌದು . ಆರೋಪಿಗೆ ಹಣ ಕೊಟ್ಟ ಸಮಯದಿಂದ ಟ್ರ್ಯಾಪ್ ಪಂಚನಾಮೆ ಮುಗಿಸುವ ಸಮಯಕ್ಕೆ ನಡುವೆ ಎಷ್ಟು ಸಮಯ ಆಗಿತ್ತು ಎಂದರೆ 3–4 ತಾಸು ಆಗಿರಬಹುದು . ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಸಮೀಪದಲ್ಲಿ ಆ ಕಡೆ ಈ ಕಡೆ ಬೇರೆ ಮನೆಗಳು ಇವೆ ಎಂದರೆ ಹೌದು . ಆ ದೇವಸ್ಥಾನದ ಬಳಿ ಆರೋಪಿಯನ್ನು ಹಿಡಿದ ಮೇಲೆ ಅವನನ್ನು ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋಗಲು ಎಷ್ಟು ಸಮಯ ಹಿಡಿಯಿತು ಎಂದರೆ ನನಗೆ ನೆನಪಾಗುತ್ತಿಲ್ಲ. ಪ್ರವಾಸಿ ಮಂದಿರದಲ್ಲಿ 3 ರಿಂದ 4 ತಾಸು ಇದ್ದೆವು . ಪ್ರವಾಸಿ ಮಂದಿರಕ್ಕೆ ನಾವು ಹೋದ ಮೇಲೆ ಅಲ್ಲಿ ಏನು ಏನು ಚಟುವಟಿಕೆ ಮಾಡಿದರು ಎಂದರೆ ಲೋಕಾಯುಕ್ತ ಪೊಲೀಸ್ ನವರು ಆರೋಪಿಯ ತಮ್ಮನಿಗೆ ಫೋನ್ ಮಾಡಿದರು. ಆರೋಪಿಯನ್ನು ದಸ್ತಗಿರಿ ಮಾಡಿದ್ದೇವೆ ಎಂದು ಹೇಳಿದರು. ಬೇರೆ ಪ್ಯಾಂಟು ಅಂಗಿ ತರಲು ಹೇಳಿದರು. ಅವರು ಅರ್ಧ ಗಂಟೆ ನಂತರ ತಂದರು. ಆರೋಪಿಯ ದುಡ್ಡು ಮುಟ್ಟಿದ ಕೈಗಳನ್ನು ತೊಳೆಸಿದರು. ಬಣ್ಣ ನೋಡಿದರು. ಸಾಕ್ಷಿ ಇನ್ನೂ ಬೇರೆ ವಿವರ ಹೇಳಲು ತಯಾರು ಇದ್ದಾರೆ. (ಈ ಹಂತದಲ್ಲಿ ಪ್ರಮುಖ ಘಟನೆಗಳು ಏನು ನಡೆದವು ಎಂದು ಹೇಳಲು ಆರೋಪಿ ಪರ ವಕೀಲರು ಕೇಳಿರುತ್ತಾರೆ ). ಆ ನೀರನ್ನು ಬಾಟಲಿಯಲ್ಲಿ ತುಂಬಿದರು. ಏನೋ ಹೆಸರು ಬರೆದರು . ನಂಬರ್ ಹಾಕಿದರು . ಟೈಪ್ ಮಾಡಿದರು. ಸಹಿಗಳನ್ನೆಲ್ಲಾ ಪಡೆದರು.

11. ಆರೋಪಿಯ ತಮ್ಮ ಬರುವವರೆಗೆ ಏನು ಮಾಡುತ್ತಿದ್ದರು ಎಂದರೆ ಟೈಪ್ ಮಾಡುತ್ತಿದ್ದರು. ಆರೋಪಿಯ ಕೈ ತೊಳೆಯಲು 10 ನಿಮಿಷ ತೆಗೆದುಕೊಂಡರು. ಬಾಟಲಿಗೆ ತುಂಬಿಸಲು 5 ನಿಮಿಷ ತೆಗೆದುಕೊಂಡರು. ಹೆಸರು ಬರೆದು ಸಂಖ್ಯೆ ಬರೆಯಲು 16–17

ನಿಮಿಷ ಸಮಯ ತೆಗೆದುಕೊಂಡರು. ಇವೆಲ್ಲಾ ಮಾಡುತ್ತಿರುವಾಗ ಟೈಪಿಂಗ್ ನಡೆಯುತ್ತಿತ್ತಾ ಎಂದರೆ ಇವರು ಹೇಳಿದಂತೆ ಬೆರಳಚ್ಚು ಮಾಡುತ್ತಿದ್ದರು. ಟೈಪಿಂಗ್ ಮಾಡಲು ಒಟ್ಟು ಒಂದುವರೆ ತಾಸು ಹಿಡಿದಿರುತ್ತದೆ . ನಂತರ ತಾಲೂಕು ಪಂಚಾಯತಿಯವರು ಬಂದರು. ಐ ಬಿ ಅಧಿಕಾರಿಗಳು ಇದ್ದರಾ ಎಂದರೆ ಅವರು ಬಾಗಿಲನ್ನು ತೆಗೆದುಕೊಟ್ಟರು . ಐ ಬಿ ಅಧಿಕಾರಿಗಳು ಮತ್ತು ತಾಲೂಕು ಪಂಚಾಯತಿಯವರು ಪಂಚನಾಮೆಗೆ ಸಹಿ ಮಾಡಿದ್ದಾರಾ ಎಂದು ನೆನಪಿಲ್ಲ. ಐ ಬಿ ಅಧಿಕಾರಿಗಳಿಂದ ಅಲ್ಲಿ ಪಂಚನಾಮೆ ಮಾಡಲು ಅನುಮತಿ ತೆಗೆದುಕೊಂಡಿದ್ದಾರಾ ಎಂದರೆ ತೆಗೆದುಕೊಂಡಿರಬಹುದು . ಪ್ರವಾಸಿ ಮಂದಿರದ ವಹಿಯಲ್ಲಿ ಅಲ್ಲಿ ಪಂಚನಾಮೆ ಮಾಡಿದ ಬಗ್ಗೆ ನಮೂದು ಮಾಡಿದ್ದಾರಾ ಎಂದು ಗೊತ್ತಿಲ್ಲ.

12. ನಾನು ಆರೋಪಿಗೆ ಹಣ ಕೊಡಲು ಹೋದ ಸಂದರ್ಭದಲ್ಲಿ ನನ್ನ ಜೊತೆ ಇನ್ನೊಬ್ಬರು ಬಂದಿದ್ದರು. ಆರೋಪಿಯ ಕೊಠಡಿಗೆ ಹೋದಾಗ ನಾನು ನಿಂತ ಕಡೆಯಿಂದ ಆ ಇನ್ನೊಬ್ಬ ನನ್ನ ಜೊತೆ ಬಂದಿದ್ದ ವ್ಯಕ್ತಿ ಸುಮಾರು 20 ಅಡಿ ದೂರದಲ್ಲಿ ಬಾಗಿಲಿನ ಆಚೆ ನಿಂತಿದ್ದ. ಕೊಠಡಿಯ ಆಚೆ ನಿಂತಿದ್ದ . ನಾನು ಆರೋಪಿಯ ಕೊಠಡಿ ಒಳಗೆ ಹೋದಾಗ ವಾಯ್ಸು ರೆಕಾರ್ಡರ್ ಚಾಲು ಮಾಡಿ ಇಟ್ಟುಕೊಂಡು ಹೋಗಿದ್ದೆ. ನಾನು ಆರೋಪಿಯನ್ನು ಒಳಗೆ ಹೋಗಿ ಭೇಟಿ ಮಾಡಿದಾಗ ನಮಸ್ಕಾರ ಸರ್ ಎಂದು ಹೇಳಿ ಕುಶಲೋಪರಿ ವಿಚಾರಿಸಿದೆನಾ ಎಂದರೆ ಹೌದು . ಆರೋಪಿ ಸಹ ನನ್ನ ಜೊತೆ ಆಗ ಮಾತನಾಡಿರುತ್ತಾನೆ . ಆಗ ಆರೋಪಿಯ ಕೊಠಡಿಯಲ್ಲಿ 10 ನಿಮಿಷ ಇದ್ದೆ. 10 ನಿಮಿಷ ಪೂರ್ತಿ ಮಾತನಾಡಿರುವುದಿಲ್ಲ. ಆರೋಪಿಯ ಕೊಠಡಿ ಒಳಗೆ ಹಣ ಕೊಡಲು ನನಗೆ ತೊಂದರೆ ಇತ್ತಾ ಎಂದರೆ ಆರೋಪಿ ಹೊರಗೆ ಹೋಗುವಾ ಎಂದು ಹೇಳಿದ . ಕೊಠಡಿ ಒಳಗೆ ಹಣ ತೆಗೆದುಕೊಂಡರೆ ಯಾರಿಗೂ ಕಾಣುತ್ತಿರಲಿಲ್ಲ ಮತ್ತು ಕೊಠಡಿ ಹೊರಗೆ ತೆಗೆದುಕೊಂಡರೆ ಬೇರೆಯವರಿಗೆ ಕಾಣುವ ಸಾಧ್ಯತೆ ಇತ್ತು ಎಂದರೆ ಏಕೆ ಆರೋಪಿ ಹಾಗೆ ಮಾಡಿದ ಎಂದು ನನಗೆ ಗೊತ್ತಿಲ್ಲ. ಆರೋಪಿ ನನ್ನ ಜೊತೆ ಶೆಡ್ ಬಳಿ ಬಂದು ನಿಂತಾದ ನನ್ನ ಜೊತೆ ಬಂದಿದ್ದ ಇನ್ನೊಬ್ಬ ಹತ್ತು ಮಾರು ದೂರದಲ್ಲಿ ಇದ್ದ. ಆರೋಪಿಯ ಕೊಠಡಿ ಒಳಗೆ ಹೋದಾಗ ನಾನು ಎಲ್ಲಿ ನಿಂತಿದ್ದೆ , ಆರೋಪಿ ಎಲ್ಲಿ ನಿಂತಿದ್ದ , ನನ್ನ ಜೊತೆ ಬಂದಿದ್ದ ಇನ್ನೊಬ್ಬ ವ್ಯಕ್ತಿ ಎಲ್ಲಿ ನಿಂತಿದ್ದ ಮತ್ತು ಅದೇ ರೀತಿ ಕೊಠಡಿಯಿಂದ ಹೊರಗೆ ಬಂದ ಮೇಲೆ ಆರೋಪಿ ಎಲ್ಲಿ ನಿಂತಿದ್ದ , ನಾನು ಎಲ್ಲಿ ನಿಂತಿದ್ದೆ ಮತ್ತು ಇನ್ನೊಬ್ಬ ವ್ಯಕ್ತಿ ಎಲ್ಲಿ

ನಿಂತಿದ್ದ ಎಂದು ನಾನು ಲೋಕಾಯುಕ್ತ ಪೊಲೀಸ್ ನವರಿಗೆ ತೋರಿಸಿರುತ್ತೇನೆ. ನಾವು ಎಷ್ಟು ಎಷ್ಟು ದೂರದಲ್ಲಿ ನಿಂತಿದ್ದೆವು ಎಂದು ಪೊಲೀಸ್ ನವರು ನಮೂದಿಸಿದ್ದಾರೆ. ಪೊಲೀಸ್ ನವರು ನಕ್ಷೆಯನ್ನು ನನ್ನ ಸಮಕ್ಷಮ ಬರೆದಿಲ್ಲ ಎಂದರೆ ಸರಿಯಲ್ಲ ಅದನ್ನು ಮಾಡುವುದಕ್ಕಾಗಿಯೇ ಪ್ರವಾಸಿ ಮಂದಿರದಲ್ಲಿ ಅಷ್ಟು ಸಮಯ ತೆಗೆದುಕೊಂಡಿರುತ್ತಾರೆ. ನಕ್ಷೆಯನ್ನು ಪ್ರವಾಸಿ ಮಂದಿರದಲ್ಲಿ ತಯಾರಿಸಿದರಾ ಎಂದರೆ ಇರಬಹುದು ಅಷ್ಟಾಗಿ ನೆನಪಿಲ್ಲ ಕಾರಣ 10 ವರ್ಷ ಆಗಿದೆ . ಆರೋಪಿಯನ್ನು ಹಿಡಿದ ಮೇಲೆ ಪುನಃ ಗುನ್ನಾ ಸ್ಥಳಕ್ಕೆ ನನ್ನನ್ನು ಲೋಕಾಯುಕ್ತ ಪೊಲೀಸ್ ನವರು ಕರೆದುಕೊಂಡು ಹೋಗಿ ಜಾಗ ನೋಡಿದರು. ಆರೋಪಿಯನ್ನು ಹಿಡಿದ ಮೇಲೆ ನನ್ನನ್ನು ಆರೋಪಿ ಕಚೇರಿಗೆ ಅವನು ಹಣ ಪಡೆದುಕೊಂಡ ಸ್ಥಳಕ್ಕೆ ಕರೆದುಕೊಂಡು ಹೋದಾಗ ಅಲ್ಲಿ 3–4 ನಿಮಿಷ ಇದ್ದೆವು . ಆ ರೀತಿ ಕರೆದುಕೊಂಡು ಹೋದ ವಿಚಾರವನ್ನು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದು ಗೊತ್ತಿಲ್ಲ. ಟ್ರ್ಯಾಪ್ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೀಗ ಮರೆತು ಹೋಗಿದೆ . ನನಗೆ ಕಾಯಿಲೆ ಬೇರೆ ಇದೆ . ನಾನು ದೈಹಿಕವಾಗಿ ಮತ್ತು ಮಾನಸಿಕವಾಗಿ ಗಟ್ಟಿ ಇದ್ದೇನೆ ಎಂದರೆ ನಾನು ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಎಲ್ಲಾ ದಾಖಲಾತಿ ನೀಡುತ್ತೇನೆ. ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಎಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇನೆ ಎಂಬ ಭಯದಿಂದ ನಾನು ನನಗೆ ಕಾಯಿಲೆ ಇದೆ , ಮರೆತು ಹೋಗಿದೆ , 10 ವರ್ಷ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಮಟಾದಲ್ಲಿ ನಾನು ಈಗಲೂ ಬೈಕ್ ನಲ್ಲಿ ತಿರುಗಾಡುತ್ತೇನೆ ಎಂದರೆ ನಾನು ಬೈಕ್ ಚಾಲನೆ ಮಾಡುತ್ತೇನೆ. ನ್ಯಾಯಾಲಯದಲ್ಲಿ ನನಗೆ ಅನಾರೋಗ್ಯ ಇದೆ ಎಂದು ನಾನು ತೀರಾ ನಾಟಕ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

13. ಮೊಬೈಲ್ ನಲ್ಲಿ ಧ್ವನಿ ಮುದ್ರಣ ಮಾಡಿಕೊಳ್ಳುವ ಪದ್ಧತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮೊಬೈಲ್ ನಲ್ಲಿ ಧ್ವನಿ ಮುದ್ರಣ ಮಾಡಿಕೊಳ್ಳಲು app ಅನ್ನು ನಾನೇ download ಮಾಡಿಕೊಂಡಿದ್ದೆ. ನಂತರ ಲೋಕಾಯುಕ್ತ ಪೊಲೀಸ್ ನವರು ಅವರ ಒಂದು ಮೊಬೈಲ್ ಅನ್ನು ಕೊಟ್ಟಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. Android Mobile ಫೋನ್ ನಲ್ಲಿ ವಾಯ್ಸ ರೆಕಾರ್ಡರ್ app ಅನ್ನು ಹೇಗೆ download ಮಾಡಿಕೊಳ್ಳಬೇಕು ಎಂದರೆ ಅದನ್ನು ಹೇಗೋ ಮಾಡುತ್ತಿದ್ದೆ ಈಗ ಅಷ್ಟಾಗಿ ನೆನಪಿಲ್ಲ. ನಾನು ನನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡೆನಾ ಅಥವಾ ಲೋಕಾಯುಕ್ತ ಪೊಲೀಸ್ ನವರು ಕೊಟ್ಟ ಮೊಬೈಲ್ ನಲ್ಲಿ ರೆಕಾರ್ಡ್

ಮಾಡಿಕೊಂಡೆನಾ ಎಂದರೆ ಅವರ ಮೊಬೈಲ್ ನಲ್ಲಿ ಇರಬಹುದು . ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಯಾರ ಮೊಬೈಲ್ ನಲ್ಲಿ ಆರೋಪಿ ಜೊತೆ ಸಂಭಾಷಣೆ ಧ್ವನಿ ಮುದ್ರಣ ಮಾಡಿಕೊಂಡೆ ಎಂದು ಹೇಳಿದೆನಾ ಎಂದು ನೆನಪಿಲ್ಲ. ಫಿರ್ಯಾದನ್ನು ಕೊಟ್ಟ ದಿನವೇ ನಾನು ಮೊಬೈಲ್ ನಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿರುವುದನ್ನು ಅವರಿಗೆ ಚಾಲು ಮಾಡಿ ಕೇಳಿಸಿರುತ್ತೇನೆ. ಆಗ ಮೊಬೈಲ್ ಅನ್ನು ನನಗೆ ವಾಪಸ್ಸು ಪೊಲೀಸ್ ನವರು ಕೊಟ್ಟರು. ಲೋಕಾಯುಕ್ತ ಪೊಲೀಸ್ ನವರು ಮೊಬೈಲ್ ಕೊಟ್ಟಿದ್ದು ಟ್ರ್ಯಾಪ್ ಕಾರ್ಯಾಚರಣೆ ಕಾಲಕ್ಕೆ ಎಂದು ಸಾಕ್ಷಿ ನುಡಿದಿರುತ್ತಾರೆ. ನನಗೆ ಮೊಬೈಲ್ ಮತ್ತು ವಾಯ್ಸ್ ರೆಕಾರ್ಡರ್ ನಡುವೆ ವ್ಯತ್ಯಾಸ ಗೊತ್ತಿದೆ . ದೂರನ್ನು ಕೊಡುವುದಕ್ಕೆ ಮೊದಲು ಪೊಲೀಸ್ ನವರು ನನಗೆ ಸಂಭಾಷಣೆ ಧ್ವನಿ ಮುದ್ರಣ ಮಾಡಿಕೊಳ್ಳಲು ಮೊಬೈಲ್ ಕೊಟ್ಟಿದ್ದರಾ ಎಂದರೆ ಸಾಕ್ಷಿಯು ನನ್ನದೆ ಮೊಬೈಲ್ ನಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿದ್ದೆ ಎಂದು ಹೇಳಿರುತ್ತಾರೆ ನಂತರ ಪೊಲೀಸ್ ನವರು ಕೊಟ್ಟಿದ್ದಿರಬಹುದು ಎಂದು ನುಡಿದಿರುತ್ತಾರೆ. ನಾನು ಪೊಲೀಸ್ ನವರಿಗೆ ಮೊಬೈಲ್ ಅನ್ನು ಫಿರ್ಯಾದು ನೀಡಿದ ಸಮಯದಲ್ಲಿಯೇ ಅದರಲ್ಲಿರುವ ಸಂಭಾಷಣೆಯನ್ನು ಅವರು ಸಿ.ಡಿ. ಮಾಡಿಕೊಂಡರು. ಆ ಸಿ.ಡಿ. ಯನ್ನು ಹಚ್ಚಿ ಕೇಳಿಸಿರುತ್ತಾರೆ. ಆ ಸಿ.ಡಿ. ಯಲ್ಲಿ ಇದ್ದ ಸಂಭಾಷಣೆಯನ್ನು ಫಿರ್ಯಾದು ಕೊಟ್ಟ ದಿನವೇ ಬರೆದುಕೊಂಡರಾ ಎಂದರೆ ಹೌದು . ಆ ಪೂರ್ತಿ ಸಂಭಾಷಣೆಯಲ್ಲಿ ಆರೋಪಿ ತಾನಾಗಿಯೇ ಹಣ ಕೊಡಿ ಎಂದು ಕೇಳಿಲ್ಲ ಎಂದರೆ ನನಗೆ ಈಗ ಅದು ನೆನಪಿಲ್ಲ. ಪೊಲೀಸ್ ನವರು ಬರೆದುಕೊಂಡಿರುವ ಸದರಿ ಸಂಭಾಷಣೆಯ ಲಿಪೀಕರಣದಲ್ಲಿ ಆರೋಪಿ ಮೊದಲಾಗಿ ಹಣ ಕೇಳಿರುವುದು ಇಲ್ಲ ಎಂದರೆ ಸರಿಯಲ್ಲ. ಅವನು ಮೊದಲು ಹಣ ಕೇಳಿರುತ್ತಾನೆ . ಆ ಸಂಭಾಷಣೆಯಲ್ಲಿ ನಾನೇ ಮೊಟ್ಟ ಮೊದಲ ಬಾರಿಗೆ ಈಗ ಎಷ್ಟು ಕಳುಹಿಸಲಿ ಟೋಟಲ್ ಎಂದು ಆರೋಪಿಗೆ ಕೇಳಿದ್ದೇನೆ ಎಂದರೆ ಮೊದಲಿಗೆ ಆರೋಪಿ ಏಳು ಸಾವಿರ ಎಂದು ಹೇಳಿದ್ದರಿಂದ ನಂತರ ಐದು ಸಾವಿರಕ್ಕೆ ಕಡಿಮೆ ಮಾಡಿಕೊಂಡಿದ್ದರಿಂದ ಕೊನೆಗೆ ರೂ. 3,000/- ಕ್ಕೆ ಒಪ್ಪಿಕೊಂಡ . ಆರೋಪಿ ಮೊದಲಿಗೆ ಹಣ ಕೇಳಿದ ಬಗ್ಗೆ ಸಂಭಾಷಣೆಯಲ್ಲಿ ಈಗ ಎಷ್ಟು ಕಳುಹಿಸಲಿ ಟೋಟಲ್ ಎಂಬ ಸಂಭಾಷಣೆಗೆ ಮೊದಲು ಇದೆಯಾ ಎಂದರೆ ಇರಬಹುದು . ರೂ. 7,000/- ಮತ್ತು 5,000/- ವನ್ನು ಆರೋಪಿ ಮೊದಲಿಗೆ ಕೇಳಿದ ಬಗ್ಗೆ ಸಂಭಾಷಣೆಯಲಿ ಇದೆಯಾ ಎಂದರೆ ರೂ. 5,000/- ಕೇಳಿರುವುದನ್ನು ಬರೆದಿದ್ದಾರೆ. ರೂ. 7,000/- ಕೇಳಿದ್ದನ್ನು ಸಂಭಾಷಣೆಯಲ್ಲಿ ಬರೆದಿದ್ದಾರಾ

ಎಂದು ನೆನಪಿಲ್ಲ. ಫಿರ್ಯಾದಿನಲ್ಲಿ ಆರೋಪಿ ಮೊದಲಿಗೆ ರೂ. 7,000/– ಕೇಳಿದ ಎಂದು ಬರೆದಿದ್ದೆನಾ ಎಂದು ನೆನಪಿಲ್ಲ. ಲಿಪೀಕರಣ ಮಾಡಿರುವ ಸಂಭಾಷಣೆಯಲ್ಲಿ ಎಲ್ಲಿಯೂ ಆರೋಪಿ ದುಡ್ಡು ಬೇಕು ಎಂದು ಕೇಳಿಲ್ಲ ಎಂದರೆ ಸರಿಯಾಗಿ ನೆನಪಿಲ್ಲ. ಆರೋಪಿ ಜೊತೆ ಮೊದಲಿಗೆ ಲೋಕಾಯುಕ್ತ ಕಚೇರಿಯಿಂದ ಫೋನ್ ನಲ್ಲಿ ಮಾತನಾಡಿರುತ್ತೇನೆ. ಆಗ ಆರಕ್ಷಕ ಉಪಾಧೀಕ್ಷಕರಿಗೆ ಖಾತ್ರಿ ಮಾಡಿಸಿದೆ . ಆಗ ಮಧ್ಯಾಹ್ನ 3.30 ಗಂಟೆಯಾಗಿತ್ತು . ಆರೋಪಿ ಜೊತೆ ಫೋನ್ ನಲ್ಲಿ ಮಾತನಾಡುವಾಗ ಆರೋಪಿ ಎದುರುಗಡೆ ಯಾರಾದರೂ ಇದ್ದರಾ ಎಂದು ತಿಳಿದುಕೊಂಡಿದ್ದೇನಾ ಎಂದರೆ ಇಲ್ಲ. ಸಾಮಾನ್ಯವಾಗಿ ಎದುರುಗಡೆ ಒಬ್ಬ ವ್ಯಕ್ತಿ ಜೊತೆ ಮಾತನಾಡುವಾಗ ಬೇರೆ ಕಡೆಯಿಂದ ಫೋನ್ ಬಂದರೆ ಆಗ ಎದುರುಗಡೆ ಕುಳಿತಿರುವ ವ್ಯಕ್ತಿಗೆ ಕೊಟ್ಟ ಉತ್ತರ ಫೋನ್ ನಲ್ಲಿ ಮಾತನಾಡುತ್ತಿರುವ ವ್ಯಕ್ತಿಗೆ ಕೊಟ್ಟ ಉತ್ತರದಂತೆ ಕಂಡು ಬರುತ್ತದೆ ಎಂದರೆ ಹೌದು . ಅಂತಹ ಸಮಯದಲ್ಲಿ ಅನರ್ಥ ಆಗುವ ಸಾಧ್ಯತೆ ಇದೆ ಎಂದರೆ ಹೌದು . ನನ್ನ ಮತ್ತು ಆರೋಪಿಯ ಮಾದರಿ ಧ್ವನಿಯನ್ನು ಲೋಕಾಯುಕ್ತ ಪೊಲೀಸ್ ನವರು ಪಡೆದರಾ ಎಂದರೆ ನನ್ನ ಮಾದರಿ ಧ್ವನಿ ಪಡೆದರು ಆರೋಪಿಯ ಮಾದರಿ ಧ್ವನಿ ಪಡೆದಿದ್ದಾರಾ ಎಂದು ಗೊತ್ತಿಲ್ಲ. ನನಗೆ ಟ್ರ್ಯಾಪ್ ಕಾಲಕ್ಕೆ ಕೊಟ್ಟಿದ್ದ ವಾಯ್ಸ ರೆಕಾರ್ಡರ್ ನ್ನು ಪ್ರವಾಸಿ ಮಂದಿರಕ್ಕೆ ಹೋದ ಕೂಡಲೇ ನನ್ನಿಂದ ತೆಗೆದುಕೊಂಡರು. ಅದರಲ್ಲಿ ಎಷ್ಟು ನಿಮಿಷದ ಧ್ವನಿ ಮುದ್ರಣ ಆಗಿತ್ತು ಎಂದು ನೆನಪಿಲ್ಲ. ಅದನ್ನು ಹಚ್ಚಿ ಕೇಳಿಸಿದರು. ಅದರಲ್ಲಿದ್ದ ಸಂಭಾಷಣೆಯನ್ನು ಬರೆದುಕೊಂಡಿದ್ದಾರೆ. ಆ ಸಂಭಾಷಣೆಯನ್ನು ನನಗೆ ಓದಿ ಹೇಳಿದ್ದಾರೆ . ಅದಕ್ಕೆ ನನ್ನ ರುಜು ಪಡೆದಿದ್ದಾರೆ.

14. ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೋನೇಟ್ ದ್ರಾವಣ ಎಂದರೆ ಏನು ಎಂದು ನನಗೆ ಗೊತ್ತು . ಶಾಂತಿಕಾ ಪರಮೇಶ್ವರಿ ದೇವಸ್ಥಾನದಿಂದ ಪ್ರವಾಸಿ ಮಂದಿರಕ್ಕೆ ಹೋದಾಗ ಆರೋಪಿ ಲೋಕಾಯುಕ್ತ ಪೊಲೀಸ್ ನವರ ಜೀಪಿನಲ್ಲಿ ಹೋಗಿರುತ್ತಾನೆ ಜೀಪಿನಲ್ಲಿ ಅವನನ್ನು ಕರೆದುಕೊಂಡು ಹೋಗಿರುತ್ತಾರೆ. ಜೀಪಿನಲ್ಲಿ ಆಗ ಐದಾರು ಜನ ಕುಳಿತಿದ್ದರು. ಆರೋಪಿ ಬೀಸಾಡಿದ ನೋಟುಗಳನ್ನು ಯಾರು ತೆಗೆದರು ಎಂದರೆ ಮೊದಲು ಅದರ ಛಾಯಾಚಿತ್ರ ತೆಗೆದರು . ನಂತರ ಆ ನೋಟುಗಳನ್ನು ತೆಗೆದರು ಆದರೆ ಯಾರು ತೆಗೆದರು ಎಂದು ನೆನಪಿಲ್ಲ. ಆ ನೋಟುಗಳನ್ನು ತೆಗೆದವರು ಅದೇ ಜೀಪಿನಲ್ಲಿ ಪ್ರಯಾಣಿಸಿದರು. ನಾನು ಆಗ ಪೊಲೀಸ್ ನವರ ಜೀಪಿನಲ್ಲಿ ಹೋದೆ . ನನ್ನ ಬೈಕ್ ಅನ್ನು ಪೊಲೀಸ್ ನವರು ಆಗ

ತೆಗೆದುಕೊಂಡು ಪ್ರವಾಸಿ ಮಂದಿರಕ್ಕೆ ಬಂದಿರಬಹುದು . ಜೀಪ್ ನಲ್ಲಿ ಆಗ ಐದಾರು ಏಳು ಜನ ಇದ್ದರು. ಆರೋಪಿ ಎಲ್ಲಿ ಕುಳಿತಿದ್ದ ಎಂದರೆ ಬಹುಶಃ ಮುಂದೆ ಅಥವಾ ಹಿಂದೆ ಇರಬಹುದು . ಆ ಸಮಯದಲ್ಲಿ ಜೀಪ್ ನಲ್ಲಿ ಒಬ್ಬರ ಮೈ ಒಬ್ಬರಿಗೆ ಒಬ್ಬರ ಕೈ ಒಬ್ಬರಿಗೆ ಸ್ಪರ್ಶವಾಗುವ ಸಾಧ್ಯತೆ ಇತ್ತು ಎಂದರೆ ಸರಿಯಲ್ಲ. ಪ್ರವಾಸಿ ಮಂದಿರದಲ್ಲಿ ದ್ರಾವಣವನ್ನು ತಯಾರಿಸಿ ಪ್ರಯೋಗ ಮಾಡಿದರು. ಆಗ ಗುಲಾಬಿ ಬಣ್ಣ ಬಂತು.

15. ಹಾಲಿನ ಪುಡಿ ಸರಬರಾಜು ಬಗ್ಗೆ ಲಿಖಿತ ಆದೇಶ ಇಲ್ಲದಿದ್ದಾಗ ಆರೋಪಿ ಕಡೆ ದೃಢೀಕರಣೆ ಪಡೆಯಬೇಕು ಎಂದು ನನಗೆ ಏಕೆ ಅನಿಸಿತು ಎಂದರೆ ಕೆ ಎಂ ಎಫ್ ನವರು ನೋಡಲ್ ಆಫೀಸರ್ ಕಡೆಯಿಂದ ಮಾಡಿಸಬೇಕು ಎಂದು ಹೇಳಿದ್ದರು ಆರೋಪಿ ನೋಡಲ್ ಆಫೀಸರ್ ಆಗಿದ್ದ . ಕೆ ಎಂ ಎಫ್ ನವರು ಲಿಖಿತವಾಗಿ ಕೇಳಿದ್ದರಾ ಎಂದರೆ ಅವರು ಕೊಟ್ಟಿದ್ದ ಪಟ್ಟಿಯಲ್ಲಿ ಅದನ್ನು ಹೇಳಿದ್ದರು. ಈ ಪ್ರಕರಣ ಆಗುವುದಕ್ಕೆ ಮೊದಲೇ ಕೆ ಎಂ ಎಫ್ ನವರು ಆ ರೀತಿ ಹೇಳಿದ್ದರು. ಆ ಪಟ್ಟಿಯನ್ನು ನಾನು ಲೋಕಾಯುಕ್ತ ಪೊಲೀಸ್ ನವರಿಗೆ ಕೊಟ್ಟಿದ್ದೆನಾ ಎಂದರೆ ಕೊಟ್ಟಿರಬಹುದು . ನನಗೆ ಹಾಲು ಪುಡಿ ಸರಬರಾಜು ಮಾಡುವ ಯಾವುದೇ ಆದೇಶ ಯಾರ ಕಡೆಯಿಂದಲೂ ಬಂದಿರಲಿಲ್ಲ ಎಂದರೆ ಸರಿಯಲ್ಲ. ಹಾಲು ಪುಡಿ ಸರಬರಾಜು ಮಾಡುವ ಯಾವುದೇ ಅಧಿಕಾರ ವ್ಯಾಪ್ತಿ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ಬಿಸಿಯೂಟ ಸರಬರಾಜು ಅನ್ನು ನಾನು ಸರಿಯಾಗಿ ಮಾಡುತ್ತಿಲ್ಲ ಎಂದು ನನ್ನ ಮೇಲೆ ಇಲಾಖೆಯಲ್ಲಿ ದೂರು ಇತ್ತು ಎಂದರೆ ಸರಿಯಲ್ಲ. ಆರೋಪಿ ನನಗೆ ಹಿಂದೆ ನೋಟಿಸು ಕೊಟ್ಟಿದ್ದಾನೆ ಎಂಬ ಸಿಟ್ಟು ನನಗೆ ಇತ್ತು ಎಂದರೆ ಸರಿಯಲ್ಲ. ಆರೋಪಿ ಅಲ್ಲೇ ಮುಂದುವರೆದರೆ ನನ್ನ ಅಕ್ರಮ ಮುಂದುವರಿಸಲು ಆಗುವುದಿಲ್ಲ ಎಂದು ನಾನು ಸುಳ್ಳು ಫಿರ್ಯಾದನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

16. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನಾನು ಪೊಲೀಸ್ ನವರಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ನೋಟುಗಳಿಗೆ ಅವರು ಯಾವುದೇ ಫಿನಾಪ್ತಲಿನ್ ಪುಡಿ ಲೇಪನ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ರಾಸಾಯನಿಕ ಪ್ರಕ್ರಿಯೆಯನ್ನು ಆ ದಿನ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಾಯ್ಸು ರೆಕಾರ್ಡರ್

ನ್ನು ಪೊಲೀಸ್ ನವರು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಹಣ ಕೊಡುವಂತೆ ಬೇಡಿಕೆ ಇಟ್ಟಿಲ್ಲ ಮತ್ತು ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ತಾಬೆಯಿಂದ ಯಾವುದೇ ಹಣ ವಶ ಆಗಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಪ್ ಕಾರ್ಯಾಚರಣೆ ಆಯಿತು ಎಂದು ಹೇಳಿದಾಗ ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಲೋಕಾಯುಕ್ತ ಪೊಲೀಸ್ ನವರು ಆರೋಪಿಯನ್ನು ಬೆನ್ನಟ್ಟಿ ಹೋಗಿದ್ದಾಗಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ಅಡ್ಡ ಹಾಕಿದ್ದಾಗಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿಯನ್ನು ಪ್ರವಾಸಿ ಮಂದಿರದ ಬಳಿ ಕರೆದುಕೊಂಡು ಹೋದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಯೂ ಯಾವುದೇ ರಾಸಾಯನಿಕ ಪ್ರಕ್ರಿಯೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಮ್ಮನ ಕಡೆಯಿಂದ ಯಾವುದೇ ಪ್ಯಾಂಟ್ ಅನ್ನು ತರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಕೈಯನ್ನು ಮತ್ತು ಅವನ ಪ್ಯಾಂಟಿನ ಕಿಸೆಯನ್ನು ಅದ್ದಿದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಾಯೋಗಿಕ ಮತ್ತು ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಲೋಕಾಯುಕ್ತ ಪೊಲೀಸ್ ನವರು ಯಾವುದೇ ವಸ್ತು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಮೇಲೆ ಸಿಟ್ಟಿನಿಂದ ಆರೋಪಿಗೆ ಶಿಕ್ಷೆ ಕೊಡಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ಜೊತೆ ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ